ಸಾಕ್ಷಿಯನ್ನು ದಿಃ **27.08.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ.ಎಸ್. ವಕೀಲರಿಂದಃ-</u>

ನಾವು ಅಣ್ಣ-ತಮ್ಮಂದಿರು ಭಾಗ ಆಗಿ ಸುಮಾರು 15-20 ವರ್ಷ ಆಗಿರಬಹುದು. ಆ ಪ್ರಕಾರ ನಮ್ಮ ನಮ್ಮ ಹಿಸ್ಸೆಗೆ ಬಂದ ಜಮೀನುಗಳನ್ನು ನಾವು ಪ್ರತ್ಯೇಕವಾಗಿಯೇ ಉಳುಮೆ ಮಾಡುತ್ತಿದ್ದೇವೆ. ರಾಜಿಮಣಿ ಕೋಂ ಚಂದ್ರಪ್ಪ ಎಂದರೆ ನನ್ನ ಅಣ್ಣನ ಹೆಂಡತಿ ಅವರು ತೀರಿಕೊಂಡಿದ್ದಾರೆ. ನಾವು ಹಂಚಿಕೊಂಡ ಪ್ರಕಾರ ನಿಪಿ 3 ರಲ್ಲಿರುವ ಜಮೀನು ಅವರ ಹಿಸ್ಸೆಗೆ ಹೋಯಿತು ಎಂದರೆ ಸರಿ. 1 ರಿಂದ 5ನೇ ಪ್ರತಿವಾದಿಯರು ನನ್ನ ಅಣ್ಣನ ಮಕ್ಕಳು. ಹಿಸ್ಸೆಯ ಪ್ರಕಾರ ನಿಪಿ 3 ರಲ್ಲಿರುವ ಜಮೀನು 1 ರಿಂದ 5ನೇ ಪ್ರತಿವಾದಿಯರ ಹಿಸ್ಸೆಗೆ ಹೋಯಿತು ಎಂದರೆ ಸರಿ. ನಿಪಿ 1 ರಲ್ಲಿ ಇರುವ ಸಹಿ ನನ್ನದು. ನಿಪಿ 1 ರಲ್ಲಿ ನನ್ನ ತಂದೆಯ ಹೆಸರು ದೊಡ್ಡನಿಂಗಪ್ಪ ಎಂದು ನಮೂದಾಗಿದೆ. ನಿಪಿ 1 ರಲ್ಲಿ ನನ್ನ ತಂದೆಯ ಹೆಸರು ನಿಂಗಪ್ಪ ಎಂದು ಬರೆದಿಲ್ಲ. ಸಾಕ್ಷಿ ಮುಂದುವರೆದು ನಿಂಗಪ್ಪ ಮತ್ತು ದೊಡ್ಡನಿಂಗಪ್ಪ ಎರಡೂ ಹೆಸರುಗಳು ನನ್ನ ತಂದೆಗೆ ಸೇರಿವೆ ಎಂದು ನುಡಿಯುತ್ತಾರೆ. ನಿಂಗಪ್ಪ ಮತ್ತು ದೊಡ್ಡನಿಂಗಪ್ಪ ಎರಡೂ ಹೆಸರುಗಳು ನನ್ನ ತಂದೆಗೆ ಸೇರಿದ್ದು ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿದ್ದೇನೆ.

ವಾದಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ದಾವಾ ಐಟಂ ನಂಬರ್ 1 ಹಾಗೂ 2 ಊಯಿಗೌಡನಹಳ್ಳಿ ಗ್ರಾಮದಲ್ಲಿದೆ. ದಾವಾ ಐಟಂ ನಂಬರ್ 3 ರ ಸರ್ವೆ ನಂಬರ್ 25 ಊಯಿಗೌಡನಹಳ್ಳಿ ಗ್ರಾಮದಲ್ಲಿದೆ ಎಂದು ವಾದಪತ್ರದಲ್ಲಿ ಬರೆಯಲಾಗಿದೆ ಎಂದರೆ ತಪ್ಪಾಗಿ ಬರೆಯಲಾಗಿದೆ. ದಾವಾ ಐಟಂ ನಂಬರ್ 3 ಮೂಲತಃ ಕಾಡು ಆಗಿತ್ತು. ನಾವು ಅಣ್ಣ-ತಮ್ಮಂದಿರು ಸೇರಿ ಕಾಡು ಕಡೆದಿದ್ದೇವೆ. ಆ ಬಗ್ಗೆ ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಪಹಣಿ ಕೊಟ್ಟಿದ್ದೇನೆ. ಪಹಣಿಯಲ್ಲಿ ಎಲ್ಲರೂ ಸೇರಿ ಕಾಡು ಕಡೆದಿದ್ದೇವೆ ಎಂದು ನಮೂದಿಲ್ಲ. ಕಾಡು ಕಡೆದಿದ್ದೇವೆ ಎನ್ನುವ ಜಮೀನು ಮೂಲತಃ ಅಣ್ಣನ ಹೆಂಡತಿಯ ಹೆಸರಿನಲ್ಲಿ ಮಾಡಿದ್ದಾರೆ. ಅಣ್ಣನ ಹೆಂಡತಿಯ ಹೆಸರಿನಲ್ಲಿ ಮಾಡಿದ್ದಾರೆ ಎಂದರೆ ಕಂದಾಯ ಇಲಾಖೆಗೆ ಅರ್ಜಿ ಕೊಟ್ಟು ಮಾಡಿದ್ದಾರೆ. ಆ ರೀತಿ ಮಾಡಿದ್ದಾರೆ ಎಂದು ಇತ್ತೀಚೆಗೆ 5-6 ವರ್ಷಗಳಿಂದ ಗೊತ್ತಾಯಿತು. ಆ ರೀತಿ ಮಾಡಿದ ಬಗ್ಗೆ ನೀವು ಏನಾದರೂ ಕ್ರಮ ಕೈಗೊಂಡಿದ್ದೀರಾ ಎಂದರೆ ಇಲ್ಲ.

ನಿಪಿ 4 ರ ಪಹಣಿ ಸರ್ವೆ ನಂಬರ್ 25 ಕ್ಕೆ ಸಂಬಂಧಿಸಿದೆ. ನಿಪಿ 4 ರಲ್ಲಿರುವ ಸರ್ವೆ ನಂಬರ್ 25 ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಪಹಣಿಯನ್ನು ಹಾಜರುಪಡಿಸಿದ್ದೇನೆ. ನಿಪಿ 4 ರ ಪಹಣಿಯು 1 ರಿಂದ 5ನೇ ಪ್ರತಿವಾದಿಯರ ಹೆಸರಿನಲ್ಲಿದೆ ಎಂದರೆ ಸರಿ ನಾನು ಆ ಬಗ್ಗೆ ದೂರನ್ನು ಕೊಟ್ಟಿದ್ದೇನೆ. ನಿಪಿ 4 ರ ಪಹಣಿ ಮತ್ತು ದಾವಾ ಎ

ಷೆಡ್ಯೂಲ್ ನ ಐಟಂ ನಂಬರ್ 3 ಬೇರೆ ಬೇರೆ ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ಇರುವ ಪಹಣಿಗಳನ್ನು ನಾನು ಹಾಜರುಪಡಿಸಿಲ್ಲ. ಕಾಡನ್ನು ನಾವು ಕಡಿದಿದ್ದೇವೆ. ಸರ್ಕಾರದ ಜಮೀನಿನಲ್ಲಿ ಕಾಡು ಕಡೆದಿದ್ದೇವೆ. ಅದು ಸರ್ಕಾರದ ಆಸ್ತಿಯಾಗಿದೆ. ನಿಪಿ 9 ರ ಮ್ಯೂಟೇಷನ್ ಲ್ಲಿ ನಂಜಮಣಿ, ರಾಜಮಣಿ, ಗುರುಮಲ್ಲಪ್ಪ, ಅವ್ವಯ್ಯಮ್ಮ, ಶಿವಲಿಂಗಪ್ಪ, ನಾಗರಾಜು ಮತ್ತು ಕಾಳಮ್ಮ ರವರ ಹೆಸರಿನಲ್ಲಿ ಜಂಟಿಯಾಗಿದೆ ಎಂದರೆ ಸರಿ ಅವರು ಮಾಡಿಸಿಕೊಂಡಿದ್ದಾರೆ.

ದಾವಾ ಐಟಂ ನಂಬರ್ 6 ರಲ್ಲಿ ಒಟ್ಟು 1 ಎಕರೆ 15 ಗುಂಟೆಯನ್ನು ಸೇರಿಸಿದ್ದೇನೆ ಎಂದರೆ ಸರಿ. ಈ ದಾವೆಯಲ್ಲಿ ನಾನು ನನ್ನ ಅಣ್ಣನ ಮಕ್ಕಳನ್ನು ಮಾತ್ರ 1 ರಿಂದ 6ನೇ ಪ್ರತಿವಾದಿಯರನ್ನಾಗಿ ಮಾಡಿದ್ದೇನೆ. ರಾಜಮಣಿ, ನಂಜಮಣಿ, ಗುರುಮಲ್ಲಪ್ಪ, ಅವ್ವಯ್ಯಮ್ಮ, ಶಿವಲಿಂಗಪ್ಪ, ನಾಗರಾಜು ಮತ್ತು ಕಾಳಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಈ ದಾವೆಯನ್ನು ಒಟ್ಟು 12 ರಿಂದ 13 ಎಕರೆಗೆ ಜಮೀನಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದೇನೆ. 6ನೇ ಪ್ರತಿವಾದಿ ಸುಮಾರು 18 ವರ್ಷಗಳಿಂದ ನಾಪತ್ತೆಯಾಗಿದ್ದಾನೆ. 6ನೇ ಪ್ರತಿವಾದಿ 18 ವರ್ಷಗಳಿಂದ ನಾಪತ್ತೆಯಾಗಿದ್ದಾರೆ ಎಂದು ನನಗೆ ಗೊತ್ತಿದ್ದರೂ ಸಹ ಅವರನ್ನು ಸೇರಿಸಿ ಈ ದಾವೆ ಹಾಕಿದ್ದೇನೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ವಿಭಾಗ ಆಗಿ ಸುಮಾರು 20 ವರ್ಷ ಆಗಿ ಪ್ರತ್ಯೇಕ ಸ್ವಾಧೀನದಲ್ಲಿದ್ದರೂ ಸಹ ಸುಳ್ಳು ದಾಖಲೆಗಳ ಆಧಾರದ ಮೇಲೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳಿಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಫಾಯಿದೆ ಹೊಂದಲು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.